**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ ಹಾಗೂ**
**ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿ.ಆಸು.ಇ. (ಚುನಾವಣೆಗಳು)**
ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560001.

---

ಸಂಖ್ಯೆ: ಸಿಆಸುಇ 06 ಮಾಸ/ಪ.ಗೋ/ 2018 ದಿನಾಂಕ: 11–05–2018

**ಪತ್ರಿಕಾ ಪ್ರಕಟಣೆ**

# ಕರ್ನಾಟಕ ವಿಧಾನಸಭಾ ಚುನಾವಣೆ–2018

## ಮುಖ್ಯ ಚುನಾವಣಾಧಿಕಾರಿಗಳ ಪತ್ರಿಕಾಗೋಷ್ಠಿಗೆ ಪ್ರಮುಖ ಅಂಶಗಳು

**ಸಾಮಾನ್ಯ ಅಂಶಗಳು :–**

- ಈ ಬಾರಿಯ ಚುನಾವಣೆಯಲ್ಲಿ ದಾಖಲೆ ಪ್ರಮಾಣದಲ್ಲಿ ಉತ್ಸಾಹದಿಂದ ಮತ ಚಲಾಯಿಸಿರುವ ಮತದಾರರಿಗೆ, ಅದರಲ್ಲೂ ವಿಶೇಷವಾಗಿ ಯುವ ಮತದಾರರಿಗೆ ಅಭಿನಂದನೆಗಳು. ದಿವ್ಯಚೇತನರು ಹಾಗೂ ಹಿರಿಯ ನಾಗರಿಕರು, ತೊಂದರೆಗಳಿದ್ದಾಗ್ಯೂ ತಮ್ಮ ಮತ ಚಲಾಯಿಸಿದ್ದಕ್ಕಾಗಿ ವಿಶೇಷವಾಗಿ ಅಭಿನಂದಿಸುತ್ತೇನೆ. ಮತಗಟ್ಟೆಗಳಲ್ಲಿ ಮತದಾರರಿಗೆ ಸಹಾಯ ಮಾಡಿದ ಸ್ವಯಂಸೇವಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.
- ಈ ಸಂದರ್ಭದಲ್ಲಿ ಕಾರ್ಯ ನಿರ್ವಹಿಸಿದ ರಾಜ್ಯ ಆಡಳಿತ ವ್ಯವಸ್ಥೆ, ಜಿಲ್ಲಾ ಚುನಾವಣಾಧಿಕಾರಿಗಳು, ಮತಗಟ್ಟೆಗಳಲ್ಲಿ ಕಾರ್ಯ ನಿರ್ವಹಿಸಿದ ಚುನಾವಣಾ ಸಿಬ್ಬಂದಿ, ಸೆಕ್ಟರ್ ಮತ್ತು ವಲಯ ಮಟ್ಟ ಹಾಗೂ ಚುನಾವಣೆಯ ವಿವಿಧ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ.
- ಎಲ್ಲ ಸಾಮಾನ್ಯ ವೀಕ್ಷಕರು, ಪೊಲೀಸ್ ವೀಕ್ಷಕರು, ವೆಚ್ಚ ವೀಕ್ಷಕರು ಹಾಗೂ ಮೈಕ್ರೊ ವೀಕ್ಷಕರನ್ನು ಮತ್ತು ಅಧಿಕಾರಿಗಳ ವ್ಯವಸ್ಥೆಯನ್ನು ಅಭಿನಂದಿಸುತ್ತೇನೆ.
- ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಒಂದೇ ಹಂತದ ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಪೊಲೀಸ್ ಸಿಬ್ಬಂದಿಯ ವ್ಯವಸ್ಥಿತ ಮತ್ತು ದಕ್ಷ ರೀತಿಯಲ್ಲಿ ನಿಯೋಜನೆ ಮಾಡಿದ ಪೊಲೀಸ್ ಇಲಾಖೆಯ ರಾಜ್ಯ ಸಮನ್ವಯ ಪೊಲೀಸ್ ಅಧಿಕಾರಿಗಳು ಮತ್ತು ಕೇಂದ್ರ ಪಡೆಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.
- ರಾಜ್ಯ ಚುನಾವಣಾ ಆಯೋಗವು ಚುನಾವಣಾ ಪ್ರಕ್ರಿಯೆಯಲ್ಲಿ ಮಾಧ್ಯಮವನ್ನು ತನ್ನ ಮಿತ್ರನೆಂದು ಭಾವಿಸಿದೆ. ಚುನಾವಣೆಗೆ ಸಂಬಂಧಿಸಿದ ಅತ್ಯುತ್ತಮ ವರದಿಯನ್ನು ನೀಡಿದ್ದಕ್ಕಾಗಿ ಮುದ್ರಣ, ವಿದ್ಯುನ್ಮಾನ, ರೇಡಿಯೋ ಮತ್ತು ಅಂತರ್ಜಾಲ ಮಾಧ್ಯಮಗಳಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಚುನಾವಣೆ ಕುರಿತು :-**

- 222 ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡಂತೆ 33 ಜಿಲ್ಲೆಗಳಲ್ಲಿ ಇಂದು ಚುನಾವಣೆ ನಡೆದಿದೆ (173-ಜಯನಗರ ಮತ್ತು 154-ರಾಜರಾಜೇಶ್ವರಿನಗರ ಹೊರತುಪಡಿಸಿ). 173-ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದ ಅಭ್ಯರ್ಥಿಯ ನಿಧನದಿಂದಾಗಿ ಚುನಾವಣೆ ಮುಂದೂಡಲ್ಪಟ್ಟಿದೆ ಹಾಗೂ 154-ರಾಜರಾಜೇಶ್ವರಿನಗರ ಕ್ಷೇತ್ರದಲ್ಲಿ ಆಯೋಗದ ಆದೇಶದಂತೆ ಚುನಾವಣೆಯನ್ನು ಮುಂದೂಡಲಾಗಿದೆ. ಈ ಎರಡು ವಿಧಾನಸಭಾ ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ ಎಲ್ಲಾ 222 ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆ ನಡೆದಿದೆ.

  ಇಂದು ಚುನಾವಣೆ ನಡೆದ 33 ಜಿಲ್ಲೆಗಳ ಪಟ್ಟಿ :-

| ಕ್ರ. ಸಂ. | ಜಿಲ್ಲೆಗಳ ಹೆಸರು |
|---|---|
| 1. | ಬೆಳಗಾವಿ |
| 2. | ಬಾಗಲಕೋಟೆ |
| 3. | ವಿಜಯಪುರ |
| 4. | ಕಲಬುರಗಿ |
| 5. | ಬೀದರ್ |
| 6. | ರಾಯಚೂರು |
| 7. | ಕೊಪ್ಪಳ |
| 8. | ಗದಗ |
| 9. | ಧಾರವಾಡ |
| 10. | ಉತ್ತರ ಕನ್ನಡ |
| 11. | ಹಾವೇರಿ |
| 12. | ಬಳ್ಳಾರಿ |
| 13. | ಚಿತ್ರದುರ್ಗ |
| 14. | ದಾವಣಗೆರೆ |
| 15. | ಶಿವಮೊಗ್ಗ |
| 16. | ಉಡುಪಿ |
| 17. | ಚಿಕ್ಕಮಗಳೂರು |
| 18. | ತುಮಕೂರು |
| 19. | ಚಿಕ್ಕಬಳ್ಳಾಪುರ |
| 20. | ಕೋಲಾರ |
| 21. | ಬೆಂಗಳೂರು ಗ್ರಾಮಾಂತರ |
| 22. | ರಾಮನಗರ |
| 23. | ಮಂಡ್ಯ |
| 24. | ಹಾಸನ |
| 25. | ದಕ್ಷಿಣ ಕನ್ನಡ |
| 26. | ಕೊಡಗು |
| 27. | ಮೈಸೂರು |
| 28. | ಚಾಮರಾಜನಗರ |
| 29. | ಯಾದಗಿರಿ |
| 30. | ಬೆಂಗಳೂರು ಕೇಂದ್ರ |
| 31. | ಬೆಂಗಳೂರು ಉತ್ತರ |
| 32. | ಬೆಂಗಳೂರು ದಕ್ಷಿಣ |
| 33. | ಬೆಂಗಳೂರು ನಗರ |

**ಚುನಾವಣೆಯ ಪ್ರಮುಖ ಅಂಶಗಳು ಹೀಗಿವೆ :-**

1) 50718472 ಮತದಾರರು- 27908 ಸೇವಾ ಮತದಾರರನ್ನು ಒಳಗೊಂಡಂತೆ.
2) ಎಎಸ್‌ಡಿ ಮತದಾರರ ಒಟ್ಟು ಸಂಖ್ಯೆ 7,73,020.
3) ಒಟ್ಟಾರೆ 2622 ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಈ ಪೈಕಿ 217 ಮಹಿಳಾ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ.
4) 40979 ಮತಗಟ್ಟೆ ಸ್ಥಳಗಳಲ್ಲಿ ಒಟ್ಟು 57416 ಮತಗಟ್ಟೆಗಳಲ್ಲಿ ಮತದಾನ ನಡೆದಿದೆ (173-ಜಯನಗರ ಮತ್ತು 154-ರಾಜರಾಜೇಶ್ವರಿನಗರಕ್ಕೆ ಸೇರಿದ 592 ಮತಗಟ್ಟೆಗಳನ್ನು ಹೊರತುಪಡಿಸಿ).
5) ಶೇ. 99.69 ರಷ್ಟು ಮತದಾರರಿಗೆ ಎಪಿಕ್ ಕಾರ್ಡುಗಳನ್ನು ವಿತರಿಸಲಾಗಿದ್ದು, ಶೇಕಡಾ 93.22 ರಷ್ಟು ಮತದಾರರಿಗೆ ಮತದಾರರ ಫೋಟೋ ಗುರುತಿನ ಚೀಟಿಗಳನ್ನು ನೀಡಲಾಗಿದೆ.
6) ಚುನಾವಣಾ ಪಟ್ಟಿಯಲ್ಲಿ ಫೋಟೋಗಳ ಶೇಕಡಾವಾರು 95.52 ರಷ್ಟಿದೆ.
7) ಇವಿಎಂ-ವಿವಿಪ್ಯಾಟ್-ಒಟ್ಟಾರೆ 57786 ಕಂಟ್ರೋಲ್ ಯೂನಿಟ್ ಮತ್ತು 64297 ಬ್ಯಾಲೆಟ್ ಯೂನಿಟ್‌ಗಳನ್ನು ಬಳಸಲಾಗಿದೆ. 57786 ವಿವಿಪ್ಯಾಟ್‌ಗಳನ್ನು ರಾಜ್ಯದ 222 ವಿಧಾನಸಭಾ ಕ್ಷೇತ್ರದಲ್ಲಿ ಬಳಸಲಾಗಿದೆ.
8) ಅಣಕು ಚುನಾವಣೆ ಮತ್ತು ಚುನಾವಣೆಯಲ್ಲಿ ಒಟ್ಟು 212 ಮತ್ತು 340 ಬ್ಯಾಲೆಟ್ ಯುನಿಟ್ ಮತ್ತು ಕಂಟ್ರೋಲ್ ಯುನಿಟ್‌ಗಳನ್ನು ಬದಲಿಸಲಾಗಿದೆ. ಅಂದರೆ ಒಟ್ಟು ಬಳಕೆ ಮಾಡಲಾದ ಇವಿಎಂಗಳ ಶೇಕಡಾ 0.33 ರಷ್ಟು ಹಾಗೂ 0.59 ರಷ್ಟು (57786 ಕಂಟ್ರೋಲ್ ಯುನಿಟ್ ಮತ್ತು 64297 ಬ್ಯಾಲೆಟ್ ಯೂನಿಟ್‌ಗಳು) ಬಳಸಲಾಗಿದೆ.
9) ಅಣಕು ಚುನಾವಣೆ ಮತ್ತು ಚುನಾವಣೆಯಲ್ಲಿ ಒಟ್ಟು 698 ವಿವಿಪ್ಯಾಟ್‌ಗಳನ್ನು ಬದಲಿಸಲಾಗಿದೆ. ಅಂದರೆ ಒಟ್ಟು ಬಳಕೆ ಮಾಡಲಾದ ವಿವಿಪ್ಯಾಟ್‌ಗಳ ಶೇಕಡಾ 1.2 ರಷ್ಟು (57786 ವಿವಿಪ್ಯಾಟ್).

**ನಿಯೋಜಿಸಲಾದ ಸಿಬ್ಬಂದಿ :-**

10) ಚುನಾವಣಾ ಪ್ರಕ್ರಿಯೆಯ ವಿವಿಧ ಚಟುವಟಿಕೆಗಳ ಮೇಲ್ವಿಚಾರಣೆಗೆ 154 ಸಾಮಾನ್ಯ ವೀಕ್ಷಕರು, 136 ವೆಚ್ಚ ವೀಕ್ಷಕರು ಹಾಗೂ 35 ಪೊಲೀಸ್ ವೀಕ್ಷಕರನ್ನು ಭಾರತ ಚುನಾವಣಾ ಆಯೋಗ ನಿಯೋಜಿಸಿದೆ.
11) ಒಟ್ಟಾರೆ 9781 ಮೈಕ್ರೋ ವೀಕ್ಷಕರನ್ನು ನಿಯೋಜಿಸಲಾಗಿದೆ.
12) ಒಟ್ಟಾರೆ 3,20,606 ಚುನಾವಣಾ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, 82,157 ಪೊಲೀಸ್ ಪಡೆ ಮತ್ತು 585 ಕಾರ್ಯ್ಸ್‌ಗಳನ್ನು ಚುನಾವಣಾ ದಿನದಂದು ನಿಯೋಜಿಸಲಾಗಿದೆ ಮತ್ತು 754 ಕೇಂದ್ರ ಪೊಲೀಸ್ ಪಡೆ ಒಳಗೊಂಡಂತೆ ಮಿಂಚಿನ ದಳವನ್ನು ನಿಯೋಜಿಸಲಾಗಿದೆ.
13) 265731 ಚುನಾವಣಾ ಸಿಬ್ಬಂದಿಗೆ ಅಂಚೆ ಮತಪತ್ರಗಳನ್ನು ವಿತರಿಸಲಾಗಿದ್ದು, ಈ ಪೈಕಿ 106891 ಮಂದಿ ತಮ್ಮ ಮತ ಚಲಾಯಿಸಿದ್ದಾರೆ.
14) ಪ್ರತಿ ಮತಗಟ್ಟೆಯಲ್ಲಿ ಕೇಂದ್ರ ಪೊಲೀಸ್‌ಪಡೆ ನಿಯೋಜಿಸಿರುವುದಲ್ಲದೇ, ಅತಿ ಸೂಕ್ಷ್ಮ ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಮತ್ತು ಮೈಕ್ರೋ ವೀಕ್ಷಕರ ನಿಯೋಜನೆ ಅಥವಾ ಎಲ್ಲಾ ಮೂರು ಅಂಶಗಳನ್ನು ಸಂಯೋಜಿಸಿ ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗಿದೆ.
15) 3500 ಸ್ಥಳಗಳಲ್ಲಿ ವೆಬ್‌ಕಾಸ್ಟಿಂಗ್ ಮಾಡಲಾಗಿದೆ.

**ಸುರಕ್ಷಾ ಕ್ರಮಗಳು :-**

16) ಶಾಂತಿಯುತ ಮತ್ತು ತೊಂದರೆ ರಹಿತ ಸುಭದ್ರ ವಾತಾವರಣ ನಿರ್ಮಿಸಲು 97031 ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ.
17) 40209 ಕ್ಕೂ ಹೆಚ್ಚು ಜಾಮೀನು ರಹಿತ ವಾರೆಂಟ್‌ಗಳನ್ನು ಹೊರಡಿಸಲಾಗಿದೆ.
18) 1461 ಅತಿಸೂಕ್ಷ್ಮ ವಸತಿ ಪ್ರದೇಶಗಳನ್ನು ಗುರುತಿಸಲಾಗಿದ್ದು, ಧೈರ್ಯ / ಆತ್ಮವಿಶ್ವಾಸ ತುಂಬುವ ಕ್ರಮಗಳನ್ನು ಎಲ್ಲ ಅತಿಸೂಕ್ಷ್ಮ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ.
19) 24965 ಗಲಭೆ ಉಂಟು ಮಾಡುವವರನ್ನು ಗುರುತಿಸಲಾಗಿದ್ದು, ಸಿಆರ್‌ಪಿಸಿ ಕಾಯ್ದೆ 107ನೇ ಪರಿಚ್ಛೇದದಡಿಯಲ್ಲಿ ಮುಚ್ಚಳಿಕೆಗಳನ್ನು ಪಡೆಯಲಾಗಿದೆ.

**ವೆಚ್ಚ ನಿರ್ವಹಣೆ :-**

20) ಮತದಾನ ಬಹಿಷ್ಕಾರಕ್ಕೆ ಸಂಬಂಧಿಸಿದ ಮಾಹಿತಿ :- ಮತದಾನ ಬಹಿಷ್ಕರಿಸಿ ಯಾವುದೇ ಪ್ರಕರಣಗಳು ವರದಿಯಾಗಿಲ್ಲ.

21) ಚುನಾವಣಾ ವೆಚ್ಚ ಪರಿವೀಕ್ಷಣೆಯ ಭಾಗವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

| ಹಂತ | ಒಟ್ಟು |
|---|---|
| **ಭಾರತೀಯ ಕರೆನ್ಸಿ** | **ರೂ.91,58,85,958/-** |
| **ಮದ್ಯ ಮುಟ್ಟುಗೋಲು** | **ರೂ.24,83,67,638.47 ಮೌಲ್ಯದ 540762.895 ಲೀ.** |
| **ಇತರೆ ಮಾಹಿತಿ** | **ಬೆಲೆ ಬಾಳುವ ಲೋಹಗಳು (ಚಿನ್ನ ಮತ್ತು ಬೆಳ್ಳಿ) ರೂ.44,28,00,717/-<br>ರೂ.40,18,725/- ಮೌಲ್ಯದ ಮಾದಕ ವಸ್ತುಗಳು / ನಾರ್ಕೋಟಿಕ್ಸ್‌ಗಳು.<br>ವಶಪಡಿಸಿಕೊಂಡಿರುವ ಇತರೆ ವಸ್ತುಗಳು (ವಾಹನ, ಸೀರೆ, ಕುಕ್ಕರ್ ಇತ್ಯಾದಿ)<br>ರೂ.21,29,23,696/-<br>ರೂ.65,97,43,138/- ಮೌಲ್ಯದ ಇತರೆ ವಸ್ತುಗಳು<br>ವಶಪಡಿಸಿಕೊಂಡಿರುವ ಒಟ್ಟು ವಸ್ತುಗಳು (ನಗದು+ಸಾಮಾಗ್ರಿ+ಮದ್ಯ+ಮಾದಕ ವಸ್ತುಗಳು) ರೂ.182,39,96,734.47** |

22) ಎಲ್ಲ ಜಿಲ್ಲೆಗಳಿಂದ 26 ಪಾವತಿ ಸುದ್ದಿಗಳ ಪ್ರಕರಣಗಳು ವರದಿಯಾಗಿದ್ದು, ಈ ಪೈಕಿ ಜಿಲ್ಲಾ ಎಂಸಿಎಂಸಿ ಸಮಿತಿಯು 15 ಪ್ರಕರಣಗಳನ್ನು ಪಾವತಿ ಸುದ್ದಿ ಎಂದು ತೀರ್ಮಾನಿಸಿದೆ.

23) ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ 1388 ಪ್ರಕರಣಗಳು.

ಈ ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಳೆದ ಕರ್ನಾಟಕ ವಿಧಾನ ಸಭೆ ಮತ್ತು ಲೋಕಸಭೆಗೆ ಹೋಲಿಸಿದಾಗ ಈ ಕೆಳಕಂಡ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

| ವರ್ಷ | ನಗದು | ಮದ್ಯ | ಇತರೆ ವಸ್ತುಗಳು |
|---|---|---|---|
| **2013** | ರೂ.14.42 ಕೋಟಿ | 67953 ಲೀ. | -- |
| **2014** | ರೂ.28.08 ಕೋಟಿ | ರೂ.2.8 ಕೋಟಿ ಮೌಲ್ಯದ 44924 ಲೀ. ಮದ್ಯ | 6.78 ಕೋಟಿ |
| **2018** | ರೂ.93,30,15,754/- | ರೂ.24,83,67,638.47 ಮೌಲ್ಯದ 540762.895 ಲೀ. ಮದ್ಯ | ರೂ.66,48,39,687.53 |

**ಮಾದರಿ ನೀತಿ ಸಂಹಿತೆಯ ಸುಧಾರಿತ ಅನುಷ್ಠಾನಕ್ಕೆ ಹಾಗೂ ವಶಪಡಿಸಿಕೊಳ್ಳುವ ವಸ್ತುಗಳ ಹೆಚ್ಚಳಕ್ಕೆ ಈ ಕೆಳಕಂಡ ವಿಶಿಷ್ಟ ಕ್ರಮಗಳನ್ನು ಕೈಗೊಳ್ಳಲಾಗಿತ್ತು.**

1) ಚುನಾವಣೆ ಘೋಷಣೆಯಾಗುವ ಒಂದು ತಿಂಗಳ ಮೊದಲೇ ಭಾರತ ಚುನಾವಣಾ ಆಯೋಗದ ಸಂಬಂಧಪಟ್ಟ ಸುತ್ತೋಲೆಗಳನ್ನು ಒಳಗೊಂಡ ಸಿದ್ಧ ಕೈಪಿಡಿಯನ್ನು ರಾಜಕೀಯ ಪಕ್ಷಗಳಿಗೆ, ಇಲಾಖಾ ಅಧಿಕಾರಿಗಳಿಗೆ, ಜಾರಿ ತಂಡಗಳಿಗೆ ಮತ್ತು ಮಾಧ್ಯಮದವರಿಗೆ ಹಾಗೂ ಎಲ್ಲಾ ಪಾಲುದಾರರಿಗೆ ಲಭ್ಯವಾಗುವಂತೆ ಮಾಡಲಾಯಿತು.
2) ಮಾದರಿ ನೀತಿ ಸಂಹಿತೆ, ಚುನಾವಣಾ ವೆಚ್ಚ ಪರಿವೀಕ್ಷಣೆ, ಅಬಕಾರಿ, ಸಾರಿಗೆ, ವಾಣಿಜ್ಯ ತೆರಿಗೆ ಮತ್ತು ಆದಾಯ ತೆರಿಗೆ ಇಲಾಖೆಗಳ ಜಿಲ್ಲಾಮಟ್ಟದ ಸಮನ್ವಯ ಅಧಿಕಾರಿಗಳಿಗೆ ರಾಜ್ಯಮಟ್ಟದ ತರಬೇತಿ / ಕಾರ್ಯಾಗಾರವನ್ನು 15 ದಿನಗಳ ಮುಂಚೆಯೇ ಹಮ್ಮಿಕೊಳ್ಳಲಾಗಿತ್ತು.
3) ಚುನಾವಣೆ ಘೋಷಣೆಯಾಗುವ ಮುನ್ನ ಒಮ್ಮೆ ಹಾಗೂ ಘೋಷಣೆಯಾದ ನಂತರ ಒಮ್ಮೆ ರಾಜಕೀಯ ಪಕ್ಷಗಳಿಗೆ ಮತ್ತು ಮಾಧ್ಯಮದವರಿಗೆ ರಾಜ್ಯಮಟ್ಟದ ತರಬೇತಿ / ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

4) ಚುನಾವಣೆ ಘೋಷಣೆಯಾಗುವ 15 ದಿನಗಳ ಮುನ್ನವೇ ಜಾರಿ ತಂಡಗಳಾದ ಫ್ಲೈಯಿಂಗ್ ಸ್ಕ್ವಾಡ್, ಸ್ಟಾಟಿಕ್ ಸರ್ವೇಲನ್ಸ್ ತಂಡಗಳು, ವಿಡಿಯೋ ವೀಕ್ಷಕ ತಂಡಗಳು, ವಿಡಿಯೋ ಸರ್ವೇಕ್ಷಣಾ ತಂಡಗಳನ್ನು ವಿಧಾನಸಭಾ ಕ್ಷೇತ್ರವಾರು ರಚಿಸಲಾಯಿತು ಹಾಗೂ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯಮಟ್ಟದಿಂದ ವಿಸ್ತೃತ ತರಬೇತಿಯನ್ನು ನೀಡಲಾಯಿತು ಹಾಗೂ ಚುನಾವಣೆ ಘೋಷಣೆಯಾದ ವೇಳೆಯಿಂದಲೇ ಕ್ರಿಯಾಶೀಲರನ್ನಾಗಿ ಮಾಡಲಾಯಿತು.
5) ಇದಲ್ಲದೇ, ಜಾರಿತಂಡಗಳು, ಜಿಲ್ಲಾ ಸಮನ್ವಯಾಧಿಕಾರಿ, ರಾಜ್ಯ ಸಮನ್ವಯಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳನ್ನು ಒಳಗೊಂಡ ವಾಟ್ಸ್ ಅಪ್ ತಂಡವನ್ನು ರಚಿಸಲಾಯಿತು. ಯಾವುದೇ ಸಂದೇಹಗಳನ್ನು ತಕ್ಷಣದಲ್ಲೇ ಸ್ಪಷ್ಟೀಕರಣ ನೀಡಿ ನಿವಾರಿಸಲಾಯಿತು. ಕ್ರಮ ಕೈಗೊಳ್ಳಬೇಕಾದ ಮಾಹಿತಿಯನ್ನು ತಕ್ಷಣವೇ ಹಂಚಿಕೊಳ್ಳಲಾಯಿತು.
6) ಮಾಧ್ಯಮ ಮೇಲ್ವಿಚಾರಣಾ ಘಟಕ, ಸಾಮಾಜಿಕ ಮಾಧ್ಯಮ ಮೇಲ್ವಿಚಾರಣಾ ಘಟಕ, 1950 ಟೋಲ್ ಫ್ರೀ ಸಂಖ್ಯೆ, ಮುದ್ದಾಂ ದೂರು ಸ್ವೀಕರಣಾ ಘಟಕ ಮತ್ತು ವಿಲೇವಾರಿ ಘಟಕನ್ನೊಳಗೊಂಡ ವಿಶಿಷ್ಟ ದೂರು ಮೇಲ್ವಿಚಾರಣಾ ಘಟಕವನ್ನು ಸ್ಥಾಪಿಸಲಾಯಿತು. ಈ ಎಲ್ಲಾ ಘಟಕಗಳು ಒಟ್ಟಾಗಿ ಒಂದೇ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು.
7) ರಾಜ್ಯಮಟ್ಟದ ಎಲ್ಲಾ ಸಮನ್ವಯ ಅಧಿಕಾರಿಗಳು ಅಂದರೆ ವೆಚ್ಚ, ಮಾದರಿ ನೀತಿ ಸಂಹಿತೆ ಸಮನ್ವಯಾಧಿಕಾರಿ, ಪೊಲೀಸ್, ಅಬಕಾರಿ, ವಾಣಿಜ್ಯ ತೆರಿಗೆ, ಸಾರಿಗೆ, ಆದಾಯ ತೆರಿಗೆ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಜಾರಿ ತಂಡಗಳೊಡನೆ ನಿಯಮಿತ ವಿಡಿಯೋ ಕಾನ್ಫರೆನ್ಸ್‌ಗಳನ್ನು ಮುಖ್ಯ ಚುನಾವಣಾಧಿಕಾರಿಗಳು ನಡೆಸಿದ್ದರು. ಅಂತರ ಇಲಾಖೆ ಸಮನ್ವಯ ಹಾಗೂ ಉತ್ತಮ ಅನುಷ್ಠಾನಕ್ಕೆ ಗರಿಷ್ಠ ಸಂಪನ್ಮೂಲಗಳನ್ನು ಬಳಸಲಾಯಿತು.
8) ಅಂತಿಮವಾಗಿ, ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾ ಸಮನ್ವಯಾಧಿಕಾರಿಗಳು ವಹಿಸಿದ ಕ್ರಿಯಾತ್ಮಕ ಹಾಗೂ ನಾಯಕತ್ವವು ಉತ್ತಮ ಅನುಷ್ಠಾನದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದೆ. ರಾಜ್ಯದಾದ್ಯಂತ ಎಲ್ಲ ತಂಡಗಳ ಸದಸ್ಯರಿಗೆ ಉತ್ತಮ ಕೆಲಸಕ್ಕೆ ನಿರಂತರ ಮತ್ತು ದೀರ್ಘಕಾಲ ಗುರುತಿಸುವಿಕೆ, ಪ್ರೋತ್ಸಾಹ ಮತ್ತು ಉತ್ತೇಜನ ನೀಡುವ ಕೆಲಸವಾಗಿದೆ.

**24. ವಿಶೇಷ ಕ್ರಮಗಳು :-**

**ಸ್ವೀಪ್ ಕ್ರಮಗಳು :-**

ಒಟ್ಟಾರೆ 10995 ಜಾಗೃತಿ ಮೂಡಿಸುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. 21.37 ಲಕ್ಷ ಜನ ಇದರಲ್ಲಿ ಪಾಲ್ಗೊಂಡಿದ್ದು, 3.4 ಕೋಟಿ ಜನ ಕಾರ್ಯಕ್ರಮಗಳನ್ನು ವೀಕ್ಷಿಸಿದ್ದಾರೆ.

ಮುದ್ರಣ, ಡಿಜಿಟಲ್ ಮತ್ತು ವಿದ್ಯುನ್ಮಾನ ಮಾಧ್ಯಮದ ಮುಖಾಂತರ ಪ್ರತಿ ಮನೆಯನ್ನು ಇದು ತಲುಪಿದೆ.

600 ಪಿಂಕ್ ಮತಗಟ್ಟೆಗಳು, 26 ಸಂಪೂರ್ಣ ದಿವ್ಯಚೇನತರಿಂದ ನಿರ್ವಹಿಸಲಾದ ಮತಗಟ್ಟೆಗಳು ಮತ್ತು 28 ಸಾಂಪ್ರದಾಯಿಕ ಮತಗಟ್ಟೆಗಳನ್ನು ಮಾದರಿ ಮತಗಟ್ಟೆಗಳನ್ನಾಗಿ ನಿರ್ಮಿಸಲಾಗಿದೆ. ಮತಗಟ್ಟೆಗಳ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

**ಸಖಿ / ಪಿಂಕ್ ಮತಗಟ್ಟೆಗಳು :-**

1. ರಾಜ್ಯದಾದ್ಯಂತ ಒಟ್ಟು 600 ಪಿಂಕ್ ಮತಗಟ್ಟೆಗಳಿವೆ.
2. ಎಲ್ಲ ಚುನಾವಣಾ ಸಿಬ್ಬಂದಿ ಮಹಿಳೆಯರೇ ಆಗಿರುತ್ತಾರೆ.
3. ಮತಗಟ್ಟೆಗಳಿಗೆ ಪಿಂಕ್ ಬಣ್ಣ ಬಳಿಯಲಾಗಿರುತ್ತದೆ. ಪ್ರವೇಶ ದ್ವಾರ ಮತ್ತು ಟೇಬಲ್‌ಗಳು ಪಿಂಕ್ ಬಣ್ಣದಲ್ಲಿಯೇ ಇರುತ್ತವೆ. ಸಿಬ್ಬಂದಿ ಸಹ ಪಿಂಕ್ ಬಣ್ಣದ ಸೀರೆ / ಧಿರಿಸು ಧರಿಸಿದ್ದಾರೆ.
4. ಮತದಾರರಿಗೆ ಸಹಾಯ ಮಾರ್ಗದರ್ಶನ ನೀಡಲು ಪ್ರತ್ಯೇಕ ಟೇಬಲ್ ವ್ಯವಸ್ಥೆ ಮಾಡಲಾಗಿದೆ.
5. ಎಲ್ಲ ಮತಗಟ್ಟೆಗಳಲ್ಲಿ ಸದೃಢ ಇಳಜಾರಿನ ವ್ಯವಸ್ಥೆ.

6. ಕುಡಿಯುವ ನೀರಿನ ವ್ಯವಸ್ಥೆ.
7. ಆರೋಗ್ಯ ರಕ್ಷಣೆಯ ವ್ಯವಸ್ಥೆ.
8. ಮಕ್ಕಳಿಗೆ ಆಟವಾಡಲು ಪ್ರತ್ಯೇಕ ಸ್ಥಳದ ವ್ಯವಸ್ಥೆ.
9. ಪ್ರವೇಶದ್ವಾರವನ್ನು ಪಿಂಕ್ ಬಲೂನುಗಳಿಂದ ಸಿಂಗಾರ ಮಾಡಲಾಗಿದೆ.
10. ದಿವ್ಯಚೇತನರಿಗೆ ಗಾಲಿಕುರ್ಚಿ, ಭೂತಗನ್ನಡಿ ಸೌಲಭ್ಯಗಳು ಮತ್ತು ಸ್ವಯಂಸೇವಕರ ನೆರವು.
11. ಶೌಚಾಲಯ.
12. ಚಿಹ್ನೆಗಳುಳ್ಳ ಫಲಕಗಳು.
13. ಸಾಲಿನಲ್ಲಿ ನಿಲ್ಲುವವರಿಗೆ ನೆರಳು.

**ದಿವ್ಯಚೇತನರು :-**

1) ಸಂಪೂರ್ಣವಾಗಿ ದಿವ್ಯಚೇನತರಿಂದ ನಿರ್ವಹಿಸಲಾದ ಮತಗಟ್ಟೆಗಳು.

| | | | |
|---|---|---|---|
| 1. | ಬೀದರ್ | – | 1 |
| 2. | ಗದಗ | – | 1 |
| 3. | ಹಾವೇರಿ | – | 2 |
| 4. | ಕೊಡಗು | – | 2 |
| 5. | ಮಂಡ್ಯ | – | 8 |
| 6. | ರಾಯಚೂರು | – | 7 |
| 7. | ಮೈಸೂರು | – | 3 |
| 8. | ವಿಜಯಪುರ | – | 2 |
| | **ಒಟ್ಟು** | – | **26 ಮತಗಟ್ಟೆಗಳು** |

2) ರಾಜ್ಯದಾದ್ಯಂತ ಒಟ್ಟು 388 ದಿವ್ಯಚೇತನರು ಚುನಾವಣಾ ಸಿಬ್ಬಂದಿಯಾಗಿ ವಿವಿಧ ಮತಗಟ್ಟೆಗಳಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ.
3) ಮೂಳೆಗೆ ಸಂಬಂಧಿಸಿದ ಅಂಗವೈಕಲ್ಯವಿರುವವರಿಗೆ 14485 ಗಾಲಿಕುರ್ಚಿಗಳನ್ನು ವ್ಯವಸ್ಥೆ ಮಾಡಲಾಗಿದೆ. ಆನ್‌ಲೈನ್ ಮೂಲಕ ಗಾಲಿಕುರ್ಚಿಯನ್ನು ಬುಕ್ ಮಾಡಿಕೊಂಡವರಿಗೆ ಮತಗಟ್ಟೆಗಳಲ್ಲಿ ಗಾಲಿಕುರ್ಚಿಗಳನ್ನು ಒದಗಿಸಲಾಗಿದೆ.
4) ಮತಗಟ್ಟೆಗಳಲ್ಲಿ ಭೂತಗನ್ನಡಿಗಳನ್ನು ಅಗತ್ಯವಿರುವವರಿಗೆ ಒದಗಿಸಲಾಗಿದೆ.

**"ಸ್ವೀಪ್‌ನ ಉದ್ದೇಶ ಮತ್ತು ಗಮನ ಒಳಗೊಳ್ಳುವ ಸುಗಮ ಮತ್ತು ನೈತಿಕ ಚುನಾವಣೆ"** ಆಗಿದೆ. ದಿವ್ಯಚೇತನರು, ಯುವಮತದಾರರು, ಲಿಂಗತ್ವ ಅಲ್ಪಸಂಖ್ಯಾತರು, ಅಲೆಮಾರಿಗಳು, ದೇವದಾಸಿ ಹಾಗೂ ಮತ್ತಿತರರನ್ನು ಮತದಾರರನ್ನಾಗಿ ನೋಂದಣಿ ಮಾಡಿಸಲು ಸ್ವೀಪ್ ಎಲ್ಲ ಪ್ರಯತ್ನವನ್ನು ಮಾಡಿದೆ. ಭಾರತರತ್ನ ಪ್ರೊ|| ಸಿ.ಎನ್.ಆರ್. ರಾವ್, ರಾಹುಲ್‌ದ್ರಾವಿಡ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ: ಚಂದ್ರಶೇಖರ ಕಂಬಾರ್ ಮತ್ತು ಮತ್ತಿತರ ಗಣ್ಯವ್ಯಕ್ತಿಗಳು ರಾಜ್ಯದ ಹೆಮ್ಮೆಯ ಐಕಾನ್‌ಗಳಾಗಿದ್ದಾರೆ. ಐಕಾನ್‌ಗಳನ್ನು ಬಳಸಿಕೊಂಡು ಸಿದ್ಧಪಡಿಸಲಾದ ಸಾಕ್ಷ್ಯಚಿತ್ರಗಳು, ಭಿತ್ತಿಪತ್ರ, ಬ್ಯಾನರ್, ಮುಂತಾದವುಗಳನ್ನು ಚಿತ್ರಮಂದಿರ, ಮಾಲ್, ಮುದ್ರಣ, ವಿದ್ಯುನ್ಮಾನ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪರಿಣಾಮಕಾರಿಯಾಗಿ ಬಳಸಲಾಗಿದೆ.

**ಧ್ಯೇಯಗೀತೆ :- ಒಳಗೊಳ್ಳುವ ಸುಗಮ ಮತ್ತು ನೈತಿಕ ಚುನಾವಣೆ ಕುರಿತು ಮೊಟ್ಟಮೊದಲ ಬಾರಿಗೆ ಚುನಾವಣಾ ಧ್ಯೇಯಗೀತೆಯನ್ನು ನಿರ್ಮಿಸಲಾಗಿದೆ.**

**ಚುನಾವಣಾ ಸಿಬ್ಬಂದಿಗೆ ಒದಗಿಸಲಾದ ಕಲ್ಯಾಣ ಕಾರ್ಯಕ್ರಮಗಳು :-**

1) ಚುನಾವಣಾ ಸಿಬ್ಬಂದಿಯ ಕಲ್ಯಾಣ ಕಾರ್ಯಕ್ರಮಗಳನ್ನು ಮೇಲ್ವಿಚಾರಿಸಲು ಸಮನ್ವಯಾಧಿಕಾರಿಯನ್ನು ನೇಮಿಸಲಾಗಿದೆ.

2) ಚುನಾವಣಾ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳ ಬಗ್ಗೆ ಮುಂಚಿತವಾಗಿಯೇ ಮಾಹಿತಿ ನೀಡಲಾಗಿತ್ತು.
3) ತರಬೇತಿ ಮತ್ತು ವಿಲೇವಾರಿ ಕೇಂದ್ರಗಳಲ್ಲಿ ಅಗತ್ಯ ವ್ಯವಸ್ಥೆಯನ್ನು ಮಾಡಲಾಗಿತ್ತು.
4) ಅಂಚೆ ಮತದಾನ ಚೀಟಿಗಳ ವಿತರಣಾ ಮತ್ತು ಸ್ವೀಕರಣಾ ಕೇಂದ್ರವನ್ನು ಸ್ಥಾಪಿಸಲಾಗಿತ್ತು.
5) ಚುನಾವಣಾ ಕರ್ತವ್ಯದಲ್ಲಿದ್ದ ಸಿಬ್ಬಂದಿಗೆ ಅವಘಡಗಳು ಸಂಭವಿಸಿದ್ದಲ್ಲಿ ಪರಿಹಾರವನ್ನು ಒದಗಿಸಲಾಗಿದೆ.
6) ಚುನಾವಣಾ ಸಿಬ್ಬಂದಿಗೆ ಆರೋಗ್ಯ ರಕ್ಷಣೆಗಾಗಿ ನಗದು ರಹಿತ ಚಿಕಿತ್ಸೆಯ ವ್ಯವಸ್ಥೆ.
7) ಚುನಾವಣಾ ಸಿಬ್ಬಂದಿಯ ಡಿಸ್‌ಪ್ಯಾಚ್ ಕೇಂದ್ರಗಳಲ್ಲಿ ಸೂಕ್ತ ವೈದ್ಯಕೀಯ ಸೌಲಭ್ಯಗಳನ್ನು ನಿರ್ವಹಿಸಲಾಗಿತ್ತು.
8) ಬಹುತೇಕ ಚುನಾವಣಾ ಸಿಬ್ಬಂದಿಗೆ ಅವರ ಬ್ಯಾಂಕ್ ಖಾತೆಗಳಗೆ ಮುಂಚಿತವಾಗಿಯೇ ಗೌರವಧನವನ್ನು ಜಮೆ ಮಾಡಲಾಗಿದೆ.
9) ಭದ್ರತಾಸಿಬ್ಬಂದಿ, ಕೇಂದ್ರ ಸಶಸ್ತ್ರ ಮೀಸಲು ಪಡೆಗಳಗೆ ನೆರವು ನೀಡಲಾಗಿದೆ.
10) ಸಾಕಷ್ಟು ಕುಡಿಯುವ ನೀರು ಮತ್ತು ಓಆರ್‌ಎಸ್ ವ್ಯವಸ್ಥೆಯನ್ನು ಮಾಡಲಾಗಿತ್ತು.
11) ಯಾವುದೇ ಆರೋಗ್ಯಕ್ಕೆ ಸಂಬಂಧಿಸಿದ ತುರ್ತು ಪರಿಸ್ಥಿತಿಯಲ್ಲಿ ನೆರವಾಗುವಂತೆ ಏರ್ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿತ್ತು.

**ಸಾಂಪ್ರದಾಯಿಕ ಮತಗಟ್ಟೆಗಳು :-**

1) ಅರಣ್ಯಗಳಲ್ಲಿ ವಾಸಿಸುವ ಆದಿವಾಸಿ ಜನಾಂಗದವರಿಗೆ ಮತದಾರರಾಗಿ ನೋಂದಾಯಿಸಿಕೊಳ್ಳಲು ಪ್ರೇರೇಪಿಸಲಾಗಿದೆ. ಪರಿಶಿಷ್ಟ ಪಂಗಡಗಳ ನಿರ್ದೇಶನಾಲಯದ ನೆರವಿನಿಂದ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.
2) ಚಾಮರಾಜನಗರ, ಉಡುಪಿ, ಕೊಡಗು, ಉತ್ತರಕನ್ನಡ, ದಕ್ಷಿಣಕನ್ನಡ, ಮೈಸೂರು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಸೇರಿದಂತೆ ಒಟ್ಟು 8 ಜಿಲ್ಲೆಗಳಲ್ಲಿ 28 ಮತಗಟ್ಟೆಗಳನ್ನು ಸ್ಥಳೀಯರ ನೆರವಿನಿಂದ ಸಾಂಪ್ರದಾಯಿಕ ಶೈಲಿಯಲ್ಲಿ ನಿರ್ಮಿಸಲಾಗಿದೆ.
3) ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಬಳಸಿ ಸಾಂಪ್ರದಾಯಿಕ ಮತಗಟ್ಟೆಗಳನ್ನು ನಿರ್ಮಿಸಲಾಗಿದೆ. ಪ್ರಾಕೃತಿಕ ಬಣ್ಣಗಳನ್ನು ಬಳಸಿಕೊಂಡು ಈ ಮತಗಟ್ಟೆಗಳನ್ನು ಅಲಂಕರಿಸಲಾಗಿದೆ.
4) ಸ್ಥಳೀಯ ಮತದಾರರು ತಮ್ಮ ಸಾಂಪ್ರದಾಯಿಕ ಉಡುಪುಗಳಲ್ಲಿ ಮತಗಟ್ಟೆಗೆ ಬಂದು ಮತ ಚಲಾಯಿಸುವಂತೆ ವಿನಂತಿಸಲಾಗಿದೆ.

**ಮಾಹಿತಿ ತಂತ್ರಜ್ಞಾನ ಕ್ರಮಗಳು :-**

1) ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯು ಪ್ರಪ್ರಥಮ ಬಾರಿಗೆ ಎಲ್ಲಾ 56696 ಮತಗಟ್ಟೆಗಳು ಮತ್ತು ಅದರ ವ್ಯಾಪ್ತಿಗಳನ್ನು ಮ್ಯಾಪ್ ಮಾಡಿ ಇಡೀ ರಾಜ್ಯವನ್ನು ಜಿಐಎಸ್ ಡೊಮೇನ್‌ಗೆ ತರಲಾಗಿದೆ.
2) ಎಲ್ಲಾ 5.06 ಕೋಟಿ ಮತದಾರರಿಗೆ ಮತಗಟ್ಟೆಗಳ ವಿವರ, ಮ್ಯಾಪ್‌ಗಳು ಮತ್ತು ಎಲ್ಲಾ ಮೂಲ ಮಾಹಿತಿಯನ್ನು ಒಳಗೊಂಡ ಮತದಾರರ ಚೀಟಿಯನ್ನು ತಲುಪಿಸಲಾಗಿದೆ.
3) ಅಂಡ್ರಾಯ್ಡ್ ಮತ್ತು ಐಓಎಸ್ ಪ್ಲಾಟ್ ಫಾರಂಗಳಲ್ಲಿ "ಚುನಾವಣಾ" ಆ್ಯಪ್ ಅನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿದೆ. ನಾಗರೀಕರು ತಮ್ಮ ವಿಧಾನಸಭಾ ಮತಕ್ಷೇತ್ರದ ಮಾಹಿತಿಯನ್ನು ಆ್ಯಪ್ ನ ಮೂಲಕ ಪಡೆಯಬಹುದಾಗಿದೆ. ನಾಗರೀಕರು ಆ್ಯಪ್‌ನ ಮೂಲಕ ಗಾಲಿಕುರ್ಚಿಗಳನ್ನು ಕಾಯ್ದಿರಿಸಬಹುದಾಗಿದ್ದು, 264 ಗಾಲಿಕುರ್ಚಿಗಳನ್ನು ಕಾಯ್ದಿರಿಸಲು ಕೋರಿಕೆಗಳನ್ನು ಸ್ವೀಕರಿಸಲಾಗಿದ್ದು, ಮತದಾನದ ದಿನ ಗಾಲಿಕುರ್ಚಿಗಳನ್ನು ಒದಗಿಸಲಾಯಿತು. ನಾಗರೀಕರು ಮತ್ತು ಚುನಾವಣಾ ಸಿಬ್ಬಂದಿಯು ಮತಗಟ್ಟೆಗಳನ್ನು ಹಾಗೂ ಎಪಿಕ್‌ಗಳನ್ನು ಹುಡುಕಬಹುದಾಗಿದ್ದು, ನಾವಿಗೇಷನ್ ಮತ್ತು ಸ್ಥಳದ ಸೇವೆಗಳನ್ನು ಈ ಮೂಲಕ ಪಡೆಯಬಹುದಾಗಿದೆ. ಚುನಾವಣಾ ದಿನದಂದು "ಚುನಾವಣಾ ಆ್ಯಪ್"ನ ಬಳಕೆ ಮತ್ತು ಡೌನ್‌ಲೋಡ್‌ನ ಸಂಖ್ಯೆ ಒಂದು ಲಕ್ಷಕ್ಕೂ ಹೆಚ್ಚಿತ್ತು.

4) ಬೆಂಗಳೂರು ನಾಗರೀಕರು ನಗರ ಮತಗಟ್ಟೆಗಳ ಸರದಿ ಸಾಲು ಸ್ಥಿತಿಗತಿ ಸೌಲಭ್ಯವನ್ನು ಹೆಚ್ಚಿಗೆ ಬಳಕೆ ಮಾಡಿದ್ದು, ಆ್ಯಪ್‌ನಲ್ಲಿ ನೀಡಲಾಗಿರುವ ಅಧಿಕಾರಿಗಳ ವಿವರಗಳು ನಾಗರೀಕರಿಗೆ ಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ನಡೆಸಲು ಹಾಗೂ ಮಾದರಿ ನೀತಿ ಸಂಹಿತೆಯ ಮೇಲ್ವಿಚಾರಣೆಗೆ ಸಹಾಯಕವಾಗಿದೆ.
5) ಫೇಸ್‌ಬುಕ್ ಭಾರತದ ಸಹಯೋಗದೊಂದಿಗೆ ಕರ್ನಾಟಕದಲ್ಲಿ 15 ಮಿಲಿಯನ್ ಫೇಸ್‌ಬುಕ್ ಬಳಕೆದಾರರಿಗೆ ಮತದಾನದ ದಿನದಂದು ಮತಹಾಕಲು ನೆನಪಿಸುವಂತೆ ಪೋಸ್ಟ್ ಹಾಕುವ ವ್ಯವಸ್ಥೆ ಮಾಡಲಾಯಿತು. ಈ ಉದ್ದೇಶಕ್ಕಾಗಿ ಅಭಿವೃದ್ಧಿ ಪಡಿಸಲಾದ ಸ್ಥಳ ಮತ್ತು ಹುಡುಕು ಅಪ್ಲಿಕೇಶನ್ ಸಂಜೆ 4.00 ಗಂಟೆಯವರೆಗೆ 1,86,000 ಜನರು ಬಳಕೆ ಮಾಡಿದ್ದಾರೆ.
6) ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಚುನಾವಣೆಗಳಿಗೆ ಸಂಬಂಧಿಸಿದ ಜಿಐಎಸ್-ಬೋರ್ಡ್ ಅನ್ನು ಅಭಿವೃದ್ಧಿಪಡಿಸಿ ಚುನಾವಣೆಗೆ ಸಂಬಂಧಿಸಿದ ಐತಿಹಾಸಿಕ ಅಂಕಿಅಂಶಗಳನ್ನು ಒಳಗೊಂಡ ಮತ್ತು ಪ್ರಸ್ತುತ ಮತ್ತು ಭವಿಷ್ಯದ ಡಾಟಾವನ್ನು ಕಾಯ್ದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಮತದಾನದ ದಿನದಂದು 60625 ಘುಟ್‌ಫಾಲ್ ಅನ್ನು ಡ್ಯಾಶ್‌ಬೋರ್ಡ್‌ನಲ್ಲಿ ದಾಖಲಿಸಲಾಗಿದೆ. ಚುನಾವಣೆಗೆ ಸಂಬಂಧಿಸಿದ ವಿಶ್ಲೇಷಣೆಗಳನ್ನು ಮಾಡಲು ಇದರಿಂದ ಸಹಾಯಕವಾಗಿದೆ ಎಂದು ಮಾಧ್ಯಮದವರು ಮತ್ತು ಅಭ್ಯರ್ಥಿಗಳು ವ್ಯಾಪಕ ಪ್ರಶಂಸೆ ವ್ಯಕ್ತ ಪಡಿಸಿದ್ದಾರೆ.

7) **ಸುವಿಧಾ :-**

ಭಾರತ ಚುನಾವಣಾ ಆಯೋಗವು ಏಕಗವಾಕ್ಷಿ ಅನುಮತಿಗಳನ್ನು ಪಡೆಯಲು ಸಿದ್ಧಪಡಿಸಿರುವ ಡೆಸ್ಕ್‌ಟಾಪ್ ಅಪ್ಲಿಕೇಶನ್‌ನಲ್ಲಿ ಒಟ್ಟಾರೆ 20321 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ 24 ಗಂಟೆಗಳ ಒಳಗೆ 11621 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಹಾಗೂ 48 ಗಂಟೆಗಳಲ್ಲಿ 7560 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

**ಎಂ3ಇವಿಎಂ ಕ್ರಮಗಳು** :-

| **ಕ್ರ. ಸಂ.** | **ಜಿಲ್ಲೆಯಿಂದ** | **ಜಿಲ್ಲೆಗೆ** | **ಮತಗಟ್ಟೆಗಳ ಸಂಖ್ಯೆ** | **ವಿತರಿಸಲಾದ ಬ್ಯಾಲೆಟ್ ಯೂನಿಟ್‌ಗಳ ಸಂಖ್ಯೆ** | **ವಿತರಿಸಲಾದ ಕಂಟ್ರೋಲ್ ಯೂನಿಟ್‌ಗಳ ಸಂಖ್ಯೆ** | **ವಿತರಿಸಲಾದ ವಿವಿಪ್ಯಾಟ್‌ಗಳ ಸಂಖ್ಯೆ** |
|---|---|---|---|---|---|---|
| 1. | ಬಿಇಎಲ್ | ಬಿಬಿಎಂಪಿ (ಕೇಂದ್ರ) | 1800<br>7 ವಿಧಾನಸಭಾ ಕ್ಷೇತ್ರಗಳು | 3610 | 2260 | 2350 |

ಬಿಬಿಎಂಪಿ ಕೇಂದ್ರ ವ್ಯಾಪ್ತಿಗೆ ಬರುವ 6 ವಿಧಾನಸಭಾ ಕ್ಷೇತ್ರಗಳಲ್ಲಿ ಎಂ3ಇವಿಎಂ ಮತ್ತು ಎಂ3 ವಿವಿಪ್ಯಾಟ್‌ಗಳನ್ನು ವಿತರಿಸಲಾಯಿತು. ಅವುಗಳೆಂದರೆ :- ಶಿವಾಜಿನಗರ, ಶಾಂತಿನಗರ, ಗಾಂಧಿನಗರ, ರಾಜಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ.

**ಚುನಾವಣಾ ಸಿಬ್ಬಂದಿಯಲ್ಲಿ ಕಡಿತ** :-

ಎಂ2ವಿವಿಪ್ಯಾಟ್‌ನಲ್ಲಿ ವಿವಿಪ್ಯಾಟ್ ಯೂನಿಟ್ ಅನ್ನು ನಿಭಾಯಿಸಲು ಒಬ್ಬ ಹೆಚ್ಚುವರಿ ಮತಗಟ್ಟೆ ಅಧಿಕಾರಿಯನ್ನು ಪ್ರತಿ ಮತಗಟ್ಟೆಗೂ ನಿಯೋಜಿಸಬೇಕಿತ್ತು. ಈ ಅಧಿಕಾರಿಯು ವಿವಿಪ್ಯಾಟ್ ಸ್ಟೇಟಸ್ ಡಿಸ್‌ಪ್ಲೇ ಯೂನಿಟ್ ಅನ್ನು ವೀಕ್ಷಿಸುವುದೇ ಕೆಲಸವಾಗಿತ್ತು. ಪ್ರಿಸೈಡಿಂಗ್ ಅಧಿಕಾರಿಯ ಮೇಜಿನ ಮೇಲೆ ಇರಿಸಲಾಗಿರುವ ಇದನ್ನು ಇಡೀ ಚುನಾವಣೆಯ ಪ್ರಕ್ರಿಯೆಯಲ್ಲಿ ವೀಕ್ಷಿಸಬೇಕಿತ್ತು.

ಆದರೆ ಎಂ3ವಿವಿಪ್ಯಾಟ್‌ನಲ್ಲಿ ವಿಎಸ್‌ಡಿಯು ಕಂಟ್ರೋಲ್ ಯೂನಿಟ್‌ನಲ್ಲಿಯೇ ಅಳವಡಿಸಲಾಗಿದ್ದು, ಮತಗಟ್ಟೆ ಅಧಿಕಾರಿಯು ವಿವಿಪ್ಯಾಟ್‌ನಲ್ಲಿ ಬರುವ ತಪ್ಪು ಸಂದೇಶವನ್ನು ಗಮನಿಸಬಹುದು. ಹೆಚ್ಚುವರಿ ಮತಗಟ್ಟೆ ಅಧಿಕಾರಿಯನ್ನು ಎಂ3ಇವಿಎಂ ಮತ್ತು ಎಂ3ವಿವಿಪ್ಯಾಟ್ ಬಳಕೆ ಮಾಡುವ ಮತಗಟ್ಟೆಯಲ್ಲಿ ನಿಯೋಜಿಸುವ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಬಿಬಿಎಂಪಿ ಕೇಂದ್ರ ವ್ಯಾಪ್ತಿಗೆ ಬರುವ 7 ವಿಧಾನಸಭಾ ಕ್ಷೇತ್ರಗಳಲ್ಲಿ 2000 ಚುನಾವಣಾ ಸಿಬ್ಬಂದಿಯನ್ನು ನಿಯೋಜಿಸುವ ಅಗತ್ಯ ಬೀಳಲಿಲ್ಲ.

**ರಾಜ್ಯದಲ್ಲಿ ಇವಿಎಂ-ವಿವಿಪ್ಯಾಟ್ ತರಬೇತಿ ಮತ್ತು ಜಾಗೃತಿ ಕುರಿತ ವಿವರಗಳು :-**

- ವಿವಿಪ್ಯಾಟ್ ಬಳಕೆ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲು ವಿಶೇಷ ತಂಡಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಈ ತಂಡಗಳು ವಿವಿಪ್ಯಾಟ್ ಯಂತ್ರಗಳೊಡನೆ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ ವಿವಿಪ್ಯಾಟ್ ಕಾರ್ಯನಿರ್ವಹಣೆ ಬಗ್ಗೆ ವಿವರಣೆ ನೀಡಿದ್ದಾರೆ. ಮತದಾರರು ಈ ಯಂತ್ರ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಪರೀಕ್ಷಿಸಲು ಸಹ ಅನುವು ಮಾಡಿಕೊಡಲಾಗಿತ್ತು.
- ಚುನಾವಣಾಧಿಕಾರಿಗಳಿಂದ ಮತದಾರರಿಗೆ ಮನವಿ ಪತ್ರವನ್ನು ವಿತರಿಸಲಾಗಿದ್ದು, ಅದರಲ್ಲಿ ವಿವಿಪ್ಯಾಟ್ ಬಳಕೆ ಕುರಿತು ಮಾಹಿತಿಯನ್ನು ಒದಗಿಸಲಾಗಿತ್ತು. ವಿವಿಪ್ಯಾಟ್ ಕುರಿತು ಸಾಕಷ್ಟು ಪ್ರಚಾರವನ್ನು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ನೀಡಲಾಗಿತ್ತು. ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಭಿತ್ತಿಪತ್ರ ಮತ್ತು ಬ್ಯಾನರ್‌ಗಳನ್ನು ಪ್ರಮುಖ ಸ್ಥಳಗಳಲ್ಲಿ ಮತ್ತು ಮತಗಟ್ಟೆಗಳ ಹೊರಗೆ ಪ್ರದರ್ಶಿಸಲಾಗಿತ್ತು.
- **ಸಾಮಾಜಿಕ ಮಾಧ್ಯಮದ ಬಳಕೆ :-** ಫೇಸ್‌ಬುಕ್, ಟ್ವೀಟರ್, ಇನ್‌ಸ್ಟಾಗ್ರಾಂ ಮೂಲಕ ಜಾಗೃತಿ ಸಂದೇಶಗಳನ್ನು ಮುಖ್ಯ ಚುನಾವಣಾಧಿಕಾರಿಗಳು, ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳ ಮಟ್ಟದಿಂದ ಕಳುಹಿಸಲಾಗಿತ್ತು.
- ಇವಿಎಂ ಮತ್ತು ವಿವಿಪ್ಯಾಟ್ ಬಳಕೆ ಕುರಿತು ರಾಜಕೀಯ ಪಕ್ಷಗಳು ಮತ್ತು ಮಾಧ್ಯಮದವರಿಗೆ ಪ್ರಾತ್ಯಕ್ಷಿಕೆ ಏರ್ಪಡಿಸಲಾಗಿತ್ತು.
- ದಿನಪತ್ರಿಕೆಗಳ ಮೂಲಕ ಕರಪತ್ರಗಳನ್ನು ವಿತರಿಸಲಾಯಿತು.
- ಗ್ರಾಮಪಂಚಾಯಿತಿಗಳಲ್ಲಿ ಇವಿಎಂ ಮತ್ತು ವಿವಿಪ್ಯಾಟ್ ಬಳಕೆ ಕುರಿತು ಸಾಕ್ಷ್ಯಚಿತ್ರಗಳ ಪ್ರದರ್ಶನ.
- ಇವಿಎಂ ಮತ್ತು ವಿವಿಪ್ಯಾಟ್ ಬಳಕೆ ಕುರಿತ ಹೆದ್ದಾರಿ ಫಲಕ, ಬ್ಯಾನರ್, ಭಿತ್ತಿಪತ್ರಗಳನ್ನು ಮತಗಟ್ಟೆಗಳು, ಪಂಚಾಯಿತಿ ಭವನ, ಪ್ರಾಥಮಿಕ ಆರೋಗ್ಯಕೇಂದ್ರ, ಆಹಾರಧಾನ್ಯಗಳ ವಿತರಣಾ ಕೇಂದ್ರಗಳು, ಬ್ಯಾಂಕ್ ಮತ್ತು ಅಂಚೆಕಚೇರಿಗಳಲ್ಲಿ ಪ್ರದರ್ಶಿಸಲಾಯಿತು.

ಇದರ ಫಲಿತಾಂಶವಾಗಿ 1,50,000 ಮತದಾರರಿಗೆ ಇವಿಎಂ ಮತ್ತು ವಿವಿಪ್ಯಾಟ್ ಬಳಕೆ ಕುರಿತು ಅನುಭವ ನೀಡಿದಂತಾಗಿದೆ. ಅಲ್ಲದೇ ಅವರುಗಳೆಲ್ಲರೂ ಈ ಯಂತ್ರಗಳ ಬಗ್ಗೆ ಸಂಪೂರ್ಣವಾಗಿ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯಾದ್ಯಂತ ಎಲ್ಲಾ ಮತದಾರರಿಗೆ ಇವಿಎಂ ಮತ್ತು ವಿವಿಪ್ಯಾಟ್ ಬಳಕೆ ಕುರಿತು ಪ್ರಾತ್ಯಕ್ಷಿಕೆಗಳನ್ನು ಮುಂದುವರೆಸಲಾಗುವುದು.

| ಕ್ರ. ಸಂ. | ತರಬೇತಿ ಪಡೆದವರ ವಿವರಗಳು | ತರಬೇತಿ ಹೊಂದಿದವರ ಸಂಖ್ಯೆ |
|---|---|---|
| 1) | ಮತದಾರರು | 1,50,00,000 |
| 2) | ರಾಜಕೀಯ ಪಕ್ಷಗಳು | 2,350 |
| 3) | ಮಾಧ್ಯಮ | 645 |
| 4) | ನ್ಯಾಯಾಂಗ ಅಧಿಕಾರಿಗಳು | 1,500 |
| 5) | ಸೆಕ್ಟರ್ ಅಧಿಕಾರಿಗಳು | 900 |
| 6) | ಎಎಲ್‌ಎಂಟಿಎಸ್ | 1,345 |

25) ಕಳೆದ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದವರ ತುಲನಾತ್ಮಕ ಅಂಕಿ ಅಂಶಗಳು :-

ಒಟ್ಟಾರೆ ಮತ ಚಲಾಯಿಸಿದವರ ಅಂಕಿ ಅಂಶಗಳು :-

| ಕ್ರ. ಸಂ. | ಜಿಲ್ಲೆಗಳು | ಲೋಕಸಭಾ ಚುನಾವಣೆ 2014 | 2013 ವಿಧಾನಸಭಾ ಚುನಾವಣೆ | ಲೋಕಸಭಾ ಚುನಾವಣೆ 2009 | 2008 ವಿಧಾನಸಭಾ ಚುನಾವಣೆ |
|---|---|---|---|---|---|
| 1) | ಬೆಳಗಾವಿ | 71.00 | 74.67 | 60.7 | 71.1 |
| 2) | ಬಾಗಲಕೋಟೆ | 68.87 | 72.94 | 63.38 | 67.58 |
| 3) | ವಿಜಯಪುರ | 59.71 | 66.07 | 47.28 | 60.06 |
| 4) | ಕಲಬುರಗಿ | 57.67 | 63.75 | 49.4 | 56.2 |
| 5) | ಬೀದರ್ | 61.32 | 66.43 | 47.28 | 57.18 |
| 6) | ರಾಯಚೂರು | 59.56 | 64.83 | 45.11 | 54.07 |
| 7) | ಕೊಪ್ಪಳ | 67.56 | 73.48 | 58.62 | 62.46 |
| 8) | ಗದಗ | 68.09 | 72.9 | 59.29 | 65.66 |
| 9) | ಧಾರವಾಡ | 65.44 | 67.16 | 56.28 | 64.37 |
| 10) | ಉತ್ತರ ಕನ್ನಡ | 69.60 | 73.66 | 60.01 | 68.76 |
| 11) | ಹಾವೇರಿ | 73.22 | 79.91 | 65.26 | 71.31 |
| 12) | ಬಳ್ಳಾರಿ | 69.79 | 73.16 | 61.08 | 66.76 |
| 13) | ಚಿತ್ರದುರ್ಗ | 66.06 | 76.65 | 51.68 | 67.89 |
| 14) | ದಾವಣಗೆರೆ | 73.20 | 75.98 | 66.71 | 70.78 |
| 15) | ಶಿವಮೊಗ್ಗ | 72.36 | 74.76 | 65.97 | 70.12 |
| 16) | ಉಡುಪಿ | 75.98 | 76.15 | 71.47 | 75.8 |
| 17) | ಚಿಕ್ಕಮಗಳೂರು | 70.46 | 75.47 | 63.18 | 71.46 |
| 18) | ತುಮಕೂರು | 71.62 | 79.32 | 65.61 | 74.69 |
| 19) | ಚಿಕ್ಕಬಳ್ಳಾಪುರ | 77.98 | 83.5 | 70.48 | 78.8 |
| 20) | ಕೋಲಾರ | 74.61 | 81.47 | 68.16 | 70.93 |
| 21) | ಬೆಂಗಳೂರು ಗ್ರಾಮಾಂತರ | 79.73 | 82.49 | 67.13 | 78.46 |
| 22) | ರಾಮನಗರ | 81.02 | 82.94 | 69.35 | 76.32 |
| 23) | ಮಂಡ್ಯ | 71.22 | 77.98 | 68.7 | 73.8 |
| 24) | ಹಾಸನ | 74.50 | 78.77 | 70.82 | 75.65 |
| 25) | ದಕ್ಷಿಣ ಕನ್ನಡ | 77.18 | 74.48 | 74.44 | 73.32 |
| 26) | ಕೊಡಗು | 69.10 | 73.27 | 63.95 | 65.26 |
| 27) | ಮೈಸೂರು | 68.32 | 65.83 | 61.78 | 67.03 |
| 28) | ಚಾಮರಾಜನಗರ | 74.01 | 78.65 | 70.48 | 78.8 |
| 29) | ಬೆಂಗಳೂರು | 56.81 | 57.38 | 45.81 | 49.87 |
| 30) | ಯಾದಗಿರಿ | 67.28 | 64.92 | 48.26 | 57.16 |
| | **ರಾಜ್ಯದ ಒಟ್ಟು** | **55.38** | **71** | **58.88** | **64.78** |

**ಇವಿಎಂ ಬದಲಾವಣೆ :-**

ಮತದಾನದ ದಿನದಂದು 3.00 ಗಂಟೆಯವರೆಗೆ ಇವಿಎಂ ಬದಲಾವಣೆ

| | | |
|---|---|---|
| ಬ್ಯಾಲೆಟ್ ಯುನಿಟ್ | - | 380 (0.55%) |
| ಕಂಟ್ರೋಲ್ ಯುನಿಟ್ | - | 348 (0.56%) |
| ವಿವಿಪ್ಯಾಟ್ | - | 1200 (1.87%) |

**ದೂರುಗಳು :-** ಸಾರ್ವಜನಿಕ ಕುಂದು ಕೊರತೆಗಳನ್ನು ಚುನಾವಣಾ ಸಂದರ್ಭದಲ್ಲಿ ನಿವಾರಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಲಾಗಿತ್ತು.

ವಿವಿಧ ಮೂಲಗಳಿಂದ ವಿವಿಧ ಪ್ಲಾಟ್‌ಫಾರಂಗಳಲ್ಲಿ ವಿಲೇವಾರಿಯಾದ ದೂರುಗಳ ಸ್ಥಿತಿಗತಿ ಈ ರೀತಿ ಇದೆ (ದಿಃ 12-5-2018 ರಲ್ಲಿದ್ದಂತೆ)

| ಕ್ರ. ಸಂ. | ವರ್ಗ | ಸ್ವೀಕರಿಸಲಾದ ಒಟ್ಟು ದೂರುಗಳು | ವಿಲೇವಾರಿಯಾದ ದೂರುಗಳು | ಬಾಕಿ ಇರುವ ದೂರುಗಳು |
|---|---|---|---|---|
| 1. | ಪತ್ರ, ಇ-ಮೇಲ್, ಇಸಿಐ ಮತ್ತು ಇತರೆ ಮೂಲಗಳಿಂದ. | 1664 | 1625 | 39 |
| 2. | ಸಾರ್ವಜನಿಕ ಕುಂದು ಕೊರತೆ ಪೋರ್ಟಲ್ (ಕರ್ನಾಟಕ ಮತ್ತು ಕೇಂದ್ರ ಚುನಾವಣಾ ಆಯೋಗ) | 8872 | 8749 | 123 |
| 3. | ಸಮಾಧಾನ್ | 2985 | 2759 | 226 |
| | **ಒಟ್ಟು** | **13405** | **13045** | **360** |

ಬಾಕಿ ಉಳಿದಿರುವ ಪ್ರಕರಣಗಳನ್ನು ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ತ್ವರಿತ ವಿಲೇವಾರಿಗೆ ಕೈಗೆತ್ತಿಕೊಳ್ಳಲಾಗಿದೆ.

**ಪ್ರಕರಣಗಳ ವರದಿ :-**

1) ಬೆಳ್ತಂಗಡಿ ತಾಲ್ಲೂಕಿನ ಮತಗಟ್ಟೆ ಸಂಃ 58 ಕ್ಕೆ ಮತದಾನ ಮಾಡಲು ಬಂದ ಅರಿಅಣ್ಣೇ ಆಚಾರ್ಯ ಎಂಬ ಮತದಾರರು ಸರದಿ ಸಾಲಿನಲ್ಲಿ ನಿಂತಿದ್ದಾಗ ಕುಸಿದು ಬಿದ್ದಿದ್ದು ಅವರನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಮಾರ್ಗ ಮಧ್ಯದಲ್ಲಿಯೇ ಅವರು ಮೃತಪಟ್ಟರು.
2) ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಸಂಃ 2 ರಲ್ಲಿ ಮರು ಮತದಾನಕ್ಕೆ ಶಿಫಾರಸ್ಸು :- ವಿವಿಪ್ಯಾಟ್, ಸ್ಲಿಪ್ ಹಾಗೂ ಇವಿಎಂ ಬ್ಯಾಲೆಟ್‌ನಲ್ಲಿ ಹೊಂದಾಣಿಕೆ ಆಗದೇ ಇರುವುದನ್ನು ಮತಗಟ್ಟೆಯಲ್ಲಿ ಗಮನಿಸಲಾಯಿತು. ವೀಕ್ಷಕರು ಹಾಗೂ ಬಿಇಎಲ್ ಅಭಿಯಂತರರು ಮತಗಟ್ಟೆಗೆ ಭೇಟಿ ನೀಡಿ ಯಂತ್ರವು ಕೆಟ್ಟಿರುವುದನ್ನು ಗಮನಿಸಿ ಮರು ಮತದಾನಕ್ಕೆ ಶಿಫಾರಸ್ಸು ಮಾಡಿದ್ದಾರೆ.
3) ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಸಂಃ 2 ಅನ್ನು ಹೊರತುಪಡಿಸಿ ಎಲ್ಲಿಯೂ ಚುನಾವಣಾ ಗಲಭೆಗಳು ನಡೆದಿರುವುದಿಲ್ಲ.
   ಹೆಬ್ಬಾಳ ವಿಧಾನಸಭಾ ಕ್ಷೇತ್ರ, ಲೊಟ್ಟೆಗೊಲ್ಲಹಳ್ಳಿ ಮತಗಟ್ಟೆ ಸಂಃ 2 ಕಾರ್ಯ ನಿರ್ವಹಿಸದ ಇವಿಎಂ. ಬೆಳಗ್ಗೆ 9.20 ಕ್ಕೆ ಹೆಬ್ಬಾಳ ವಿಧಾನಸಭಾ ಕ್ಷೇತ್ರ, ಲೊಟ್ಟೆಗೊಲ್ಲಹಳ್ಳಿ ಮತಗಟ್ಟೆ ಸಂಃ 2 ರಲ್ಲಿ ಇವಿಎಂ ಕಾರ್ಯ ನಿರ್ವಹಿಸದ ಬಗ್ಗೆ ವರದಿಯಾಯಿತು. ಬಿಬಿಎಂಪಿ ಆಯುಕ್ತರು, ಸಹಾಯಕ ಚುನಾವಣಾಧಿಕಾರಿಗಳು ಬಿಬಿಎಂಪಿ ಪೂರ್ವ ಮತ್ತು ಚುನಾವಣಾಧಿಕಾರಿಗಳು ವೀಕ್ಷಕರೊಂದಿಗೆ ಭೇಟಿ ನೀಡಿದರು.

ಬಿಇಎಲ್ ಅಭಿಯಂತರರು ನೀಡಿರುವ ತಾಂತ್ರಿಕ ವರದಿಯಲ್ಲಿ ಹೀಗೆ ವಿವರಿಸಲಾಗಿದೆ :-

1) ಕಂಟ್ರೋಲ್ ಯೂನಿಟ್‌ನ ಬ್ಯಾಲೆಟ್ ಕುರಿತಂತೆ

ಎ) ಬಿಯು1 ರಲ್ಲಿ ಬಟಲ್ ಸಂಖ್ಯೆ 9 ತನ್ನಷ್ಟಕ್ಕೇ ಮತವನ್ನು ಹಾಕುತ್ತಾ ಇತ್ತು.

ಬಿ) ಕ್ರಮ ಸಂಖ್ಯೆ 9 ಕ್ಕೆ ವಿವಿಪ್ಯಾಟ್ ಬ್ಯಾಲೆಟ್ ಸ್ಲಿಪ್ ಅನ್ನು ಮುದ್ರಿಸುತ್ತಿತ್ತು.

ಸಿ) ಕಂಟ್ರೋಲ್ ಯುನಿಟ್ ಮತವನ್ನು ದಾಖಲಿಸುತ್ತಿತ್ತು.

ಡಿ) ನಾವು ಯಾವುದೇ ಕ್ರಾಸ್ ವೋಟಿಂಗ್ ಗಮನಿಸಿಲ್ಲ. ಅಂದರೆ ಇನ್ಯಾರಿಗೋ ನೀವು ಮತ ಹಾಕುತ್ತಿದ್ದು, ಮತ್ಯಾರಿಂದಲೋ ಅದು ಮತವನ್ನು ಪಡೆಯುವುದು.

ಇದು ಸಂಪೂರ್ಣವಾಗಿ ತಾಂತ್ರಿಕ ಸಮಸ್ಯೆಯಾಗಿದ್ದು, ಬ್ಯಾಲೆಟ್ ಯೂನಿಟ್‌ನಲ್ಲಿಯೇ ಸಮಸ್ಯೆ ಕಂಡು ಬಂದಿದೆ. ಕಂಟ್ರೋಲ್ ಯುನಿಟ್ ಮತ್ತು ವಿವಿಪ್ಯಾಟ್‌ನಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ.

4) ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿ ಚುನಾವಣೆಯು ಶಾಂತಿಯುತವಾಗಿ ನಡೆದಿದೆ. ಘಟನೆಯ ವಿವರ ಹೀಗಿದೆ :-

1) **ಹಣ ವಿತರಣೆ :_** ಮಾಜಿ ನಗರಸಭಾ ಸದಸ್ಯ ಮಲ್ಲೇಶ್ ಅವರನ್ನು ಬಂಧಿಸಲಾಗಿದ್ದು, ಎಫ್‌ಐಆರ್ 1358/2018 ಅನ್ನು 2.30 ಗಂಟೆಗೆ ದಾಖಲಿಸಲಾಗಿದೆ.
2) ರಾಯಚೂರು ಜಿಲ್ಲಾ ಚುನಾವಣಾಧಿಕಾರಿಗಳು ಮತದಾರರನ್ನು ಸಾಗಿಸುತ್ತಿದ್ದ ದೂರಿನ ಮೇಲೆ 20 ಆಟೋರಿಕ್ಷಾಗಳನ್ನು ಮಸ್ಕಿ ಮತ್ತು ರಾಯಚೂರು ಗ್ರಾಮಗಳಲ್ಲಿ ವಶಪಡಿಸಿಕೊಂಡಿದ್ದಾರೆ.
3) ಹಾವೇರಿ ಜಿಲ್ಲೆಯ ದೇವಗಿರಿ ಗ್ರಾಮದ ಮತಗಟ್ಟೆಯಲ್ಲಿ ತಮ್ಮ ಗ್ರಾಮದಲ್ಲಿ ಮೂಲಸೌಕರ್ಯಗಳು ಲಭ್ಯವಿಲ್ಲದ ಕಾರಣ ಹಿರಿಯ ಮಹಿಳೆಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

- ಪಾರವ್ವ ಅಕ್ಕಸಾಲಿ (58) ಕೌಟುಂಬಿಕ ಸಮಸ್ಯೆಗಳ ಕಾರಣ ಸೀಮೆಎಣ್ಣೆಯನ್ನು ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ವರದಿ ಮಾಡಿದ್ದು, ಪೋಲೀಸ್ ಹಾಗೂ ಕಂದಾಯ ಅಧಿಕಾರಿಗಳು ಆಕೆಯನ್ನು ಒಪ್ಪಿಸಿ ಮತ ಹಾಕಿಸಿದ್ದಾರೆ.

**5) ಸಣ್ಣ ಘಟನೆಗಳು** :-

ಎ) ಇವಿಎಂ ಯಂತ್ರದಲ್ಲಿ ಪಕ್ಷದ ಚಿಹ್ನೆಯನ್ನು ಸೂಚಿಸುವ ಬಟನ್ ಮೇಲೆ ಮತಗಟ್ಟೆ ಅಧಿಕಾರಿಗಳು ಶಾಹಿಯನ್ನು ಚೆಲ್ಲಿದ್ದಾರೆ ಎಂದು ಕೆಲವು ಜನ ದೂರು ನೀಡಿದ್ದರಿಂದ ಚಿಕ್ಕೋಡಿಯ ಮತಗಟ್ಟೆ ಸಂಖ್ಯೆ 280 ರಲ್ಲಿ ಕೆಲಕಾಲ ಮತದಾನ ಸ್ಥಗಿತವಾಯಿತು. ಸಮಸ್ಯೆಯು ಬಗೆಹರಿದಿದ್ದು, ಮತದಾನವನ್ನು ಸುಗಮವಾಗಿ ಮುಂದುವರೆಸಲಾಯಿತು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ವರದಿ ಮಾಡಿದ್ದಾರೆ.

ಬಿ) ಬೆಂಗಳೂರಿನ ವಿಜಯನಗರದ ವಿರೂಪಾಕ್ಷೇಶರ ಸ್ವಾಮಿ ಎಜುಕೇಷನ್ ಸೊಸೈಟಿ ಬಳಿ ಇರುವ ಮತಗಟ್ಟೆಯಲ್ಲಿ ಬಿಜೆಪಿ ನಗರಸಭಾ ಸದಸ್ಯ ಆನಂದ ಹೊಸೂರ್ ಅವರ ಮೇಲೆ ಕಾಂಗ್ರೆಸ್ ಕಾರ್ಯಕರ್ತರು ದಾಳಿ ನಡೆಸಿದರು. ಬೆಂಗಳೂರು ಜಿಲ್ಲಾ ಚುನಾವಣಾಧಿಕಾರಿಗಳು ಘಟನೆಯನ್ನು ತಹಬದಿಗೆ ತರಲಾಗಿದೆ ಎಂದು ವರದಿ ಮಾಡಿದ್ದಾರೆ.

ಸಿ) ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಗ್ರಾಮದಲ್ಲಿ ರಡ್ಡೇರಹಳ್ಳಿ ಮತಗಟ್ಟೆ ಸಂಖ್ಯೆ 226 ರಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಗುಂಪು ಗಲಭೆಗಳು ನಡೆದಿದ್ದು, ತಕ್ಷಣವೇ ಪರಿಸ್ಥಿತಿಯನ್ನು ತಕ್ಷಣವೇ ತಹಬದಿಗೆ ತರಲಾಯಿತು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ವರದಿ ಮಾಡಿ, ಅವರು ಮತದಾನ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಡಿ) ಮೈಸೂರು ಜಿಲ್ಲೆಯ ಚಾಮರಾಜ ವಿಧಾನಸಭಾ ಕ್ಷೇತ್ರದ ಬೂತ್ ಸಂಖ್ಯೆ 42 ರಲ್ಲಿ ಸುಮಾರು 100 ಮತದಾರರು ಧರಣಿ ನಡೆಸಿ ಮತದಾನ ಬಹಿಷ್ಕಾರ ಮಾಡಿದರು. ಜಿಲ್ಲಾ ಚುನಾವಣಾಧಿಕಾರಿಗಳು ಮಧ್ಯೆ ಪ್ರವೇಶಿಸಿ ಅವರು ಮತದಾನ ಮಾಡುವಂತೆ ಪ್ರೇರಿಪಿಸುವಲ್ಲಿ ಯಶಸ್ವಿಯಾದರು.

ಇ) ಗಂಗಾವತಿಯ ಲಂಬಾಣಿ ತಾಂಡಾದಲ್ಲಿ ಚುನಾವಣಾ ಅಭ್ಯರ್ಥಿ ಇಕ್ಬಾಲ್ ಅನ್ಸಾರಿ ಅವರ ಬೆಂಬಲಿಗರು ಹಣ ವಿತರಿಸಿದ್ದಾಗಿ ಬಿಜೆಪಿ ಕಾರ್ಯಕರ್ತರು ಆರೋಪಿಸಿದರು. ಜಿಲ್ಲಾ ಚುನಾವಣಾಧಿಕಾರಿಗಳು ನಿತ್ಯಾನಂದ ಮತ್ತು ಪೀರ್ ಅಹ್ಮದ್ ಅವರನ್ನು ಗಂಗಾವತಿ ನಗರ ಪೋಲೀಸ್ ಠಾಣೆಯಲ್ಲಿ ಬಂಧಿಸಲಾಗಿದೆ ಎಂದು ವರದಿ ಮಾಡಿದ್ದಾರೆ.

*****